ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – ೫೬೦ ೦೦೧

ಸಂಖ್ಯೆ:ಸ.ಶಿ.ಅ/ಹೆ.ಮ.ಶಿ/ಕೆಜಿಬಿವಿ/2009–10/2010–11 ದಿನಾಂಕ: 03.10.2013

## ಸುತ್ತೋಲೆ

**ವಿಷಯ:** 2013–14 ನೇಯ ಸಾಲಿಗೆ ಕೆಜಿಬಿವಿ ಶಾಲೆಗಳಲ್ಲಿ ಪೂರ್ಣ ಪ್ರಮಾಣದ ದಾಖಲಾತಿ ಸಾಧಿಸುವ ಬಗ್ಗೆ.

**ಉಲ್ಲೇಖ:** 1) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸ.ಶಿ.ಅ/ಹೆ.ಮ.ಶಿ/ಕೆಜಿಬಿವಿ/ಮಾರ್ಗಸೂಚಿ/ 2013–14 ದಿನಾಂಕ: 07.05.2013.

2) ದಿನಾಂಕ: 10.05.2013 ರಂದು ಈ ಕಛೇರಿಯಲ್ಲಿ ನಡೆದ ಕೆಜಿಬಿವಿ ಮುಖ್ಯಶಿಕ್ಷಕರ/ವಾರ್ಡನ್‌ಗಳ ಪ್ರಗತಿ ಪರಿಶೀಲನಾ ಸಭೆ.

3) ಮಾನ್ಯ ನಿರ್ದೇಶಕರು ಎಂ.ಹೆಚ್.ಆರ್.ಡಿ ರವರ ಪತ್ರದ(ಫ್ಯಾಕ್ಸ್) ಸಂಖ್ಯೆ: ನಂ.21–2/2013 EEB ದಿನಾಂಕ:17.9.2013.

******

ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ 71 ಬ್ಲಾಕ್‌ಗಳಲ್ಲಿ ಶಾಲೆಯಿಂದ ಹೊರಗುಳಿದ ಹೆಣ್ಣು ಮಕ್ಕಳಿಗಾಗಿ ಕೆ.ಜಿ.ಬಿ.ವಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಮೇಲ್ಕಂಡ ಉಲ್ಲೇಖ–1 ಮತ್ತು 2 ರಂತೆ ದಾಖಲಾತಿ ನಿಯಮಗಳ ಅನುಸಾರ ಎಲ್ಲಾ ಕೆಜಿಬಿವಿ ವಸತಿಶಾಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಅರ್ಹ ಮಕ್ಕಳ ದಾಖಲಾತಿಯನ್ನು ಸಾಧಿಸಿ ಯೋಜನೆಯ ಸದುಪಯೋಗ ಪಡಿಸಿಕೊಳ್ಳಲು ಸೂಚಿಸಲಾಗಿತ್ತು.

ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಹಾಗೂ ರಾಜ್ಯ ಯೋಜನಾ ಕಛೇರಿಯ ಜಿಲ್ಲಾ ನೋಡಲ್ ಅಧಿಕಾರಿಗಳು ಜಿಲ್ಲಾ ಪ್ರಗತಿ ಪರಿಶೀಲನಾ ಸಂದರ್ಭದಲ್ಲಿ ಕೆಜಿಬಿವಿ ಶಾಲೆಗಳಿಗೆ ಭೇಟಿ ನೀಡಿದಾಗ ಈ ಕೆಳಕಂಡ ಅರ್ಹ ಮಕ್ಕಳಿಗೆ ಕೆಜಿಬಿವಿ.ಗಳಲ್ಲಿ ಅವಕಾಶ ಮಾಡಿಕೊಡದೆ ಬಹುತೇಕ ಶಾಲೆಗೆ ಹೋಗುವ ವಿದ್ಯಾರ್ಥಿನಿಯರನ್ನೆ ದಾಖಲೆ ಮಾಡಿಕೊಂಡಿರುವುದು ಗಮನಿಸಲಾಗಿದೆ. ಉಲ್ಲೇಖ–3ರ ಎಂ.ಹೆಚ್.ಆರ್.ಡಿ ರವರ ಪತ್ರದಲ್ಲಿಯೂ ಸಹ ಸದರಿ ಅಂಶವನ್ನು ಒತ್ತಿ ಹೇಳಿರುತ್ತಾರೆ. ಆದ್ದರಿಂದ ಕೆಜಿಬಿವಿ.ಗಳಲ್ಲಿ ದಾಖಲಾತಿ ನಿಯಮಗಳ ಉಲ್ಲಂಘನೆಯಾಗಿರುವುದು ಕಂಡು ಬಂದಿದ್ದು ಇದಕ್ಕೆ ಸಂಬಂಧಿಸಿದ ಜಿಲ್ಲೆಗಳು ಹೊಣೆಗಾರರಾಗುತ್ತೀರಿ. ಈ ಬಗ್ಗೆ ಕೆಜಿಬಿವಿ.ಗಳಲ್ಲಿ ಪರಿಶೀಲಿಸಿ ದಾಖಲಾತಿ ನಿಯಮಗಳನುಸಾರ ಅರ್ಹ ಮಕ್ಕಳಿಗೆ ವ್ಯಾಸಂಗ ಮಾಡಲು ಅವಕಾಶ ಮಾಡಿಕೊಡುವುದು. ವಿಶೇಷವಾಗಿ ಅಲ್ಪಸಂಖ್ಯಾತ ಮುಸ್ಲಿಂ ವಿದ್ಯಾರ್ಥಿನಿಯರು ಹಾಗೂ ವಿಕಲಚೇತನ ಮಕ್ಕಳ ದಾಖಲಾತಿ ಕಡಿಮೆ ಪ್ರಮಾಣದಲ್ಲಿದ್ದು ಇವರ ದಾಖಲಾತಿಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳುವುದು.

### ಕೆ.ಜಿ.ಬಿ.ವಿ ಶಾಲೆಗಳ ದಾಖಲಾತಿ ನಿಯಮಗಳು

1. ಪ್ರಾಥಮಿಕ ಹಂತದಲ್ಲಿ 10+ ರಿಂದ 14 ವಯಸ್ಸಿನ ಶಾಲೆಯಿಂದ ಹೊರಗುಳಿದ, ಶಾಲೆಬಿಟ್ಟ ಹಾಗೂ ನಿರ್ಗತಿಕ, Single Parent ಬಾಲಕಿಯರಿಗೆ ಪ್ರಥಮ ಆದ್ಯತೆ ನೀಡುವುದು.
2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಹೆಣ್ಣು ಮಕ್ಕಳಿಗೆ ಶೇ.75% ರಷ್ಟು ಮತ್ತು ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವವರಿಗೆ ಶೇ.25% ರಷ್ಟು ಮೀಸಲಾತಿ ನೀಡುವುದು.

**ಮುಂದುವರೆಯುವುದು**

3. ಮುಸ್ಲಿಂ ಅಲ್ಪ ಸಂಖ್ಯಾತ ವರ್ಗದ ವಿದ್ಯಾರ್ಥಿನಿಯರ ದಾಖಲಾತಿ ಜನಸಂಖ್ಯೆ ಪ್ರಮಾಣಕ್ಕೆ ಹೋಲಿಸಿದಲ್ಲಿ ಕಡಿಮೆ ಇದ್ದು ಅವರ ದಾಖಲಾತಿಗೆ ವಿಶೇಷ ಗಮನ ಹರಿಸುವುದು.

4. ಅಂಗವಿಕಲತೆಯಿಂದಾಗಿ ಶಾಲೆಯಿಂದ ಹೊರಗೆ ಉಳಿದಿರುವ ವಿಕಲಚೇತನ ಹೆಣ್ಣುಮಕ್ಕಳಿಗೂ ಈ ಶಾಲೆಗಳಲ್ಲಿ ಆದ್ಯತೆ ನೀಡುವುದು.

ರಾಜ್ಯದ 71 ಕೆಜಿಬಿವಿ.ಗಳಲ್ಲಿ ಒಟ್ಟು 8300 ವಿದ್ಯಾರ್ಥಿನಿಯರಿಗೆ ವ್ಯಾಸಂಗ ಮಾಡಲು ಅವಕಾಶವಿದ್ದು, ಆಗಸ್ಟ್ 2013 ತಿಂಗಳ ಪ್ರಗತಿ ವರದಿಯನ್ನು ಪರಿಶೀಲಿಸಿದಾಗ ಇನ್ನೂ 440 ವಿದ್ಯಾರ್ಥಿನಿಯರಿಗೆ ದಾಖಲಾತಿಗೆ ಅವಕಾಶವಿರುತ್ತದೆ. ಕೆಲವು ಕೆಜಿಬಿವಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಿರುವುದು ಕಂಡುಬರುತ್ತದೆ. (ಕೆಜಿಬಿವಿವಾರು ಕಡಿಮೆ ದಾಖಲಾತಿ ಹೊಂದಿರುವ ಶಾಲೆಗಳ ವಿವರಗಳನ್ನು ಲಗತ್ತಿಸಿದೆ).

**ಮೇಲ್ಕಂಡ ಉಲ್ಲೇಖ-3 ರಂತೆ 2013-14ನೇ ಸಾಲಿಗೆ ಕೆಜಿಬಿವಿ ಶಾಲೆಗಳಲ್ಲಿ ಪೂರ್ಣ ಪ್ರಮಾಣ ದಾಖಲಾತಿ ಸಾಧಿಸಿ ವಿವಿಧ ಚಟುವಟಿಕೆಗಳಿಗೆ ಅನುಮೋದಿಸಿರುವ ಅನುದಾನವನ್ನು ಸಮರ್ಪಕ ರೀತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಸದ್ಬಳಕೆ ಮಾಡಿಕೊಳ್ಳಲು ತಿಳಿಸಿರುತ್ತಾರೆ.** ಆದ್ದರಿಂದ ಈಗಾಗಲೆ ತಿಳಿಸಿರುವಂತೆ ದಾಖಲಾತಿ ನಿಯಮಗಳ ಅನುಸಾರ ಪೂರ್ಣ ಪ್ರಮಾಣದ ದಾಖಲಾತಿ ಸಾಧಿಸುವುದು ಹಾಗೂ ಕೆಜಿಬಿವಿ.ಗಳಲ್ಲಿ ವಿವಿಧ ಚಟುವಟಿಕೆಗಳಿಗೆ ನಿಗದಿಪಡಿಸಿರುವ ಅನುದಾನವನ್ನು ಸಂಪೂರ್ಣವಾಗಿ ನಿಯಮಾನುಸಾರ ಬಳಕೆ ಮಾಡಿಕೊಳ್ಳುವುದು. ಪೂರ್ಣ ಪ್ರಮಾಣದ ದಾಖಲಾತಿ ಸಾಧಿಸದಿದ್ದಲ್ಲಿ ಮುಖ್ಯಶಿಕ್ಷಕರು/ಬ್ಲಾಕ್/ಜಿಲ್ಲಾ ಹಂತದ ಅಧಿಕಾರಿಗಳನ್ನು ಹೊಣೆ ಮಾಡಲಾಗುವುದು. ಜಿಲ್ಲಾ ಹಾಗೂ ತಾಲ್ಲೂಕಿನ ಅಧಿಕಾರಿಗಳು ಈ ಬಗ್ಗೆ ವಿಶೇಷ ಗಮನ ಹರಿಸುವುದು.

**ಕೆಲವು ಕೆಜಿಬಿವಿ.ಗಳಲ್ಲಿ ಅನುಮೋದಿತ ಮಕ್ಕಳ ಸಂಖ್ಯೆಗಿಂತ ಹೆಚ್ಚಿನ ಮಕ್ಕಳನ್ನು ದಾಖಲಾತಿ ಮಾಡಿಕೊಂಡಿರುವುದು ಕಂಡು ಬಂದಿದೆ. ಇದು ನಿಯಮ ಉಲ್ಲಂಗನೆಯಾಗಿದ್ದು ಹೆಚ್ಚಿನ ವಿದ್ಯಾರ್ಥಿನಿಯರನ್ನು ಕೆಕೆಜಿಬಿವಿ.ಗಳಲ್ಲಿ ದಾಖಲಾತಿ ಮಾಡಿಸಲು ಕ್ರಮಕೈಗೊಳ್ಳುವುದು. ಪ್ರತಿ ತಿಂಗಳು ಪ್ರಗತಿ ವರದಿಯನ್ನು ನಿಗದಿತ ನಮೂನೆಯಲ್ಲಿ ದಿನಾಂಕ 5 ರೊಳಗಾಗಿ ಖಡ್ಡಾಯವಾಗಿ ಈ** ssagirlsed@yahoo.co.in **ಇ- ಮೇಲ್ ನಲ್ಲಿ ಸಲ್ಲಿಸುವುದು.**

**ಸಹಿ/-**
**ಜಂಟಿ ನಿರ್ದೇಶಕರು (ಕಾರ್ಯಕ್ರಮ)**
**ಸರ್ವ ಶಿಕ್ಷಣ ಅಭಿಯಾನ**

**ಅಗತ್ಯ ಕ್ರಮಕ್ಕಾಗಿ,**

1. ಸಂಬಂಧಿಸಿದ ಜಿಲ್ಲೆಗಳ ಉಪನಿರ್ದೇಶಕರು(ಆ) ಮತ್ತು ಡಿವೈಪಿಸಿ ರವರ ಅಗತ್ಯ ಕ್ರಮಕ್ಕಾಗಿ.
2. ಉಪನಿರ್ದೇಶಕರು(ಆ)/ಡಿವೈಪಿಸಿ ಮೂಲಕ ಬಿ.ಇ.ಓ., ಬಿ.ಆರ್.ಸಿ ಮತ್ತು ಕೆ.ಜಿ.ಬಿ.ವಿ. ಮುಖ್ಯ ಶಿಕ್ಷಕರುಗಳಿಗೆ.
3. ರಾಜ್ಯ ಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಮಖ್ಯಾ, ನಂ. 367, 11ನೇ ಕ್ರಾಸ್, 2ನೇ ಬ್ಲಾಕ್, 4ನೇ ಮೇನ್, ಆರ್.ಟಿ.ನಗರ, ಬೆಂಗಳೂರು ರವರ ಅಗತ್ಯ ಕ್ರಮಕ್ಕಾಗಿ.

**ಮಾಹಿತಿಗಾಗಿ,**

1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಕಳುಹಿಸುತ್ತಾ ಮಾನ್ಯರ ಅವಗಾಹನೆಗೆ ತರಲು ಕೋರಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ರವರಿಗೆ ಅನುಪಾಲನೆಗಾಗಿ ಕೋರುತ್ತ.
3. ಕಛೇರಿ ಪ್ರತಿ.